# ಆಸ್ಟಿಯೊ ಆರ್ಥ್‌ರೈಟಿಸ್

## ಮಂಡಿನೋವಿಗೆ ರೊಬೋಟಿಕ್ ಸರ್ಜರಿ

**ತೀವ್ರ ಅಸ್ಥಿ ಸಂಧಿವಾತದಿಂದ ಬಳಲಿದ ವ್ಯಕ್ತಿಯೊಬ್ಬರಿಗೆ ರೊಬೋಟಿಕ್ ತಂತ್ರಜ್ಞಾನ ಬಳಸಿ 'ಟೋಟಲ್ ನೀ ರಿಪ್ಲೇಸ್‌ಮೆಂಟ್ ಸರ್ಜರಿ'ಯ ಮೂಲಕ ಸೂಕ್ತ ಪರಿಹಾರವನ್ನು ನಾರಾಯಣ ಹೆಲ್ತ್ ಸಿಟಿ ವೈದ್ಯರು ಕಂಡುಕೊಂಡಿದ್ದಾರೆ. ಅಪರೂಪದ ಸರ್ಜರಿ ಇದಾಗಿದ್ದು, ಹಲವು ವರ್ಷಗಳಿಂದ ನಡೆದಾಡಲೂ ಕಷ್ಟ ಅನುಭವಿಸುತ್ತಿದ್ದ ವ್ಯಕ್ತಿ ಇದರಿಂದ ಸರಾಗವಾಗಿ ನಡೆಯುವಂತಾಗಿದೆ.**

■ ಉಮಾ ಅನಂತ್



ಕಲಬುರಗಿಯ ಐವತ್ತೇಳು ವರ್ಷದ ರವೀಂದ್ರ ಇತ್ತಂಗುಡಿ ಅವರಿಗೆ ಹಲವು ವರ್ಷಗಳಿಂದ ವಿಪರೀತ ಮಂಡಿನೋವು. ನಡೆದಾಡಲೂ ಕಷ್ಟವಾಗಿದ್ದ ಇವರು ಬೆಂಗಳೂರಿನ ನಾರಾಯಣ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದರು. ಇವರನ್ನು ಪರೀಕ್ಷಿಸಿದ ವೈದ್ಯರು ಸಂಪೂರ್ಣ ಮಂಡಿ ಬದಲಾವಣೆ (ಟೋಟಲ್ ನೀ ರಿಪ್ಲೇಸ್‌ಮೆಂಟ್) ಶಸ್ತ್ರಚಿಕಿತ್ಸೆ ಒಂದೇ ಇದಕ್ಕೆ ಸೂಕ್ತ ಪರಿಹಾರ ಎಂದರು. ಅದರಂತೆ ಅತ್ಯಾಧುನಿಕ ರೊಬೋಟಿಕ್ ತಂತ್ರಜ್ಞಾನದ ಮೂಲಕ ಸಣ್ಣ ಇಂಪ್ಲಾಂಟ್‌ನೊಂದಿಗೆ (ದೇಹದೊಳಕ್ಕೆ ಸೇರಿಸುವ ಉಪಕರಣ) ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿದ್ದು ರವೀಂದ್ರ ಈಗ ಸರಾಗವಾಗಿ ನಡೆದಾಡುವಂತಾಗಿದೆ. ಆಸ್ಟಿಯೊ ಆರ್ಥ್‌ರೈಟಿಸ್ (ಅಸ್ಥಿ ಸಂಧಿವಾತ) ಎಂದು ಕರೆಯಲಾಗುವ ಈ ತೀವ್ರತರದ ಮಂಡಿನೋವಿಗೆ ಸರ್ಜರಿಯೊಂದೇ ದಾರಿ.

ರವೀಂದ್ರ ಹಲವಾರು ವರ್ಷಗಳಿಂದಲೂ ಮಂಡಿನೋವಿನಿಂದ ಬಳಲುತ್ತಿದ್ದರು. ಕೇವಲ 3.5 ಅಡಿ ಎತ್ತರದ ಇವರಿಗೆ ಬರೀ ಮಂಡಿನೋವಲ್ಲದೆ ಇನ್ನೂ ಕೆಲ ಆರೋಗ್ಯ ಸಮಸ್ಯೆಗಳು ಕಾಡುತ್ತಿದ್ದವು. ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೂ ಯಾವುದೇ ಫಲಕಾರಿಯಾಗಿರಲಿಲ್ಲ. ಹೀಗಾಗಿ ಬೆಂಗಳೂರಿಗೆ ಚಿಕಿತ್ಸೆಗಾಗಿ ಬರಬೇಕಾಯಿತು. ಸಂಬಂಧಿಸಿದ ಸ್ಕ್ಯಾನಿಂಗ್, ರಕ್ತಪರೀಕ್ಷೆ, ಎಕ್ಸ್‌ರೇ ಮುಂತಾದವನ್ನು ಮಾಡಿದ ತಜ್ಞ ವೈದ್ಯರು ಮಂಡಿ ಚಿಪ್ಪು ಬದಲಾವಣೆ ಮಾಡುವ ಮೂಲಕ ಇವರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಂತೆ ಮಾಡಿದರು.

'ಈ ಹಿಂದೆ ತೊಡೆಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ರವೀಂದ್ರ ಅವರಿಗೆ ಈ ಶಸ್ತ್ರಚಿಕಿತ್ಸೆ ನಡೆಸುವುದು ಪ್ರತಿ ಹಂತದಲ್ಲೂ ಸವಾಲೇ ಆಗಿತ್ತು. ಆರಂಭಿಕ ಹಂತದ ಪರೀಕ್ಷೆ ವೇಳೆ ರೋಗಿಗೆ ಮೊಣಕಾಲಿನ ನೋವು ವಿಪರೀತ ಇತ್ತು. ತೊಡೆಯ ಮೂಳೆಯು ಹೆಚ್ಚು ಅಸಮಾನತೆಯಿಂದ ಕೂಡಿರುವುದು ಹಾಗೂ ಮಂಡಿಯ ಚಲನವಲನಕ್ಕೆ ಪೂರಕವಾಗಿರಲಿಲ್ಲ




ಆಸ್ಟಿಯೊ ಆರ್ಥ್‌ರೈಟಿಸ್‌ಗೆ ಒಳಗಾಗಿ ರೊಬೋಟಿಕ್ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಕಲಬುರಗಿಯ ರವೀಂದ್ರ, ನಾರಾಯಣ ಹೆಲ್ತ್ ಸಿಟಿಯ ವೈದ್ಯರೊಂದಿಗೆ.

### ಚಳಿಗಾಲದಲ್ಲೇ ಹೆಚ್ಚು

ಸಂಧಿವಾತ ಸಾಮಾನ್ಯವಾಗಿ ಚಳಿಗಾಲದಲ್ಲೇ ಕಾಡುವುದು ಹೆಚ್ಚು. ಕರ್ನಾಟಕದಲ್ಲಿ ಹೆಚ್ಚಿನ ಮಹಿಳೆಯರು ಮಂಡಿನೋವು ಹಾಗೂ ಇತರ ಭಾಗಗಳ ಕೀಲುನೋವಿನಿಂದ ಬಳಲುತ್ತಿದ್ದಾರೆ. ಅದರಲ್ಲೂ 40ರಿಂದ 60 ವರ್ಷದವರೆಗಿನ ಮಹಿಳೆಯರಲ್ಲಿ ಈ ನೋವು ಅಧಿಕವಾಗಿ ಕಾಣಿಸಿಕೊಳ್ಳುತ್ತಿದೆ.

ಮೂಳೆ ಸವೆಯುವುದು ಸಂಧಿವಾತದ ಪ್ರಮುಖ ಲಕ್ಷಣ. ಜಾಯಿಂಟ್‌ನಲ್ಲಿ ನೋವು ಜಾಸ್ತಿಯಾದರೆ ದಿನನಿತ್ಯದ ಚಟುವಟಿಕೆಗಳಿಗೆ ಕಷ್ಟವಾಗುತ್ತದೆ. ಕಾಯಿಲೆ ಉಲ್ಬಣವಾದರೆ ಅದು ಬೇರೆ ಅಂಗಗಳಿಗೆ ಹರಡುವ ಸಾಧ್ಯತೆಯೂ ಇದೆ. ಹೀಗಾಗಿ ನೋವು ಕಂಡುಬಂದ ಕೂಡಲೇ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲೇಬೇಕು.

ಸಂಧಿವಾತ ಕೆಲವರಿಗೆ ಆನುವಂಶಿಕವಾಗಿಯೂ ಬರಬಹುದು. ಮಹಿಳೆಯರಿಗೆ ಲೂಪಸ್ (Lupas) ಎಂಬ ಹಾರ್ಮೋನಿನಿಂದ ಬರುತ್ತದೆ. ಕೆಲವರಿಗೆ